ಒರಿಸ್ಸಾ ಜನಪದ ಚಿತ್ರಕಲೆ

ಪಟ್ಟಚಿತ್ರ



-ಚಿತ್ರ, ಲೇಖನ: ಎನ್.ಸಿ. ದೇಸಾಯಿ

'ಉದಯವಾಣಿ' ದೀಪಾವಳಿ ಸಂಚಿಕೆ ೧೯೮೬



* ರಥಾರೂಢ ಸಮರೋತ್ಸಾಹಿ ಅರ್ಜುನ

ನಮ್ಮ ದೇಶದಲ್ಲಿ ಬೇರೆ ಬೇರೆ ಪ್ರದೇಶಗಳಲ್ಲಿ ಭಾಷೆ, ಸಂಸ್ಕೃತಿ, ಉಡುಗೆ ತೊಡುಗೆ, ಊಟ, ಉಪಚಾರ ಮುಂತಾದವುಗಳಲ್ಲಿ ಭಿನ್ನ. ಭಿನ್ನವಾದ ರೀತಿಗಳಿರುವಂತೆ –ಜಾನಪದ ಚಿತ್ರಕತೆಗಳಲ್ಲೂ ವೈವಿಧ್ಯತೆಯನ್ನು ಕಾಣುತ್ತೇವೆ. ಒಂದೇ ಪ್ರದೇಶದಲ್ಲಿ–ಉತ್ತರ ದಿಕ್ಕಿನಲ್ಲಿಯ ಕಲೆ ಬೇರೆಯಾದರೆ. ದಕ್ಷಿಣದ ಶೈಲಿಯೇ ಇನ್ನೊಂದು ರೀತಿಯಲ್ಲಿ ಬೆಳೆದು ಬಂದಿರುತ್ತದೆ. ಬಹುಶಃ ಈ ತೆರನಾದ ಇಷ್ಟು ವಿವಿಧತೆ ಮತ್ತಾವ ದೇಶಗಳಲ್ಲೂ ಕಂಡು ಬರಲಿಕ್ಕಿಲ್ಲ.

ಬಿಹಾರ ಮತ್ತು ಒರಿಸ್ಸಾ ಮಗ್ಗುಲಿನ ನಾಡುಗಳು. ಒಂದು ನಾಡಿನ ಗಡಿಯನ್ನು ದಾಟಿದರೆ – ಇನ್ನೊಂದರಲ್ಲಿ ಕಾಣುವ ಚಿತ್ರಗಳ ಶೈಲಿಯೇ ಬೇರೆ, ಉಪಯೋಗಿಸುವ ವರ್ಣಗಳೂ ಬೇರೆ, ಚಿತ್ರಿಸುವ ರೀತಿಯಲ್ಲೂ ವ್ಯತ್ಯಾಸವನ್ನು ಕಾಣುತ್ತೇವೆ. ಒರಿಸ್ಸಾದ ಕೆಲಭಾಗದಲ್ಲಿ ಬೆಳೆದು ಬಂದ ಜಾನಪದ ಕಲೆ 'ಪಟ್ಟಾ' ಚಿತ್ರವೆಂದು ಕರೆದರೆ. ಬಿಹಾರಿನ ಜಾನಪದ ಕಲೆಗೆ 'ಮಧುಬನಿ' ಚಿತ್ರಗಳು ಎಂದು ಕರೆಯಲ್ಪಡುತ್ತವೆ.

ಒರಿಸ್ಸಾದ ರಾಜಧಾನಿ – ಪುರಿಯ 'ಜಗನ್ನಾಥ' ಪ್ರಸಿದ್ಧ, ಅಲ್ಲಿಯ ರಥೋತ್ಸವವಂತೂ ತೀರ ಪ್ರಸಿದ್ಧವಾದುದು. ಈ ಸ್ವಾಮಿಯ ಉತ್ಸವ ಬಂತೆಂದರೆ ಈ 'ಪಟ್ಟಾ' ಚಿತ್ರಕಲೆಗೆ ಹೆಚ್ಚಿನ ಚಟುವಟಿಕೆ ಪ್ರಾರಂಭವಾಗುತ್ತದೆ. ಕಾರಣ, ಪ್ರತಿಯೊಂದು ಮನೆಯಲ್ಲೂ ಆ ಸಮಯಕ್ಕೆ ಜಗನ್ನಾಥನ ಚಿತ್ರವನ್ನು ಚಿತ್ರಿಸುವ ರೂಢಿ. ಹೀಗೆ ಈ ಪಟ್ಟಾ ಚಿತ್ರಕಲೆ ಜನ್ಮವಾದುದು ಎಷ್ಟೋ ಶತಮಾನಗಳ ಹಿಂದೆ. ಈ ರೀತಿಯಲ್ಲಿ ಹುಟ್ಟಿದ ಚಿತ್ರಕಲೆ. ಬರಬರುತ್ತಾ ವಿವಿಧ ವಿಷಯಗಳನ್ನು ಆರಿಸಿಕೊಂಡು ಕವಲೊಡೆಯಿತು. ವಿಷಯಗಳು ರಾಮಾಯಣ ಮಹಾಭಾರತಗಳಿಂದಲೇ ಹೆಚ್ಚಾಗಿ ಆಯ್ದವು. ಅಲ್ಲದೆ – ಜಾನಪದ ವಿಷಯಗಳೂ, ವಿವಿಧ ಅಲಂಕಾರಗಳಲ್ಲಿ ಜಗನ್ನಾಥನನ್ನು ಬಿಡಿಸಿದಂತೆ ಚಿತ್ರಗಳ ಅಳತೆಯಲ್ಲೂ ವೈವಿಧ್ಯತೆ ಕಂಡು ಬರುತ್ತದೆ. ಕೆಲವು ಚಿಕಣಿ (Miniature) ಚಿತ್ರಗಳಾದರೆ ಕೆಲವು ಬೃಹದಾಕಾರದಲ್ಲಿ ಬಿಡಿಸಿದವು.

ಈ ಚಿತ್ರಗಳಲ್ಲಿ ಬರುವ ವ್ಯಕ್ತಿಗಳ ಮುಖ ಎಂದೂ ಎದುರಾಗಿ ಇರದೇ ಇರುವುದು ಒಂದು ವಿಶೇಷ (ನಾನು ನೋಡಿದವುಗಳಲ್ಲಿ ಗಣಪತಿಯನ್ನು ಬಿಟ್ಟರೆ). ಯಾವಾಗಲೂ ಮುಖ ಎಡಕ್ಕೋ ಬಲಕ್ಕೋ ಹೊರಳಿದ್ದೇ ಇರುತ್ತದೆ. (Profile). ಮೊನೆಯಾದ ಮೂಗು, ಅಂದವಾದ ರೀತಿಯಲ್ಲಿ ಗೋಲಾಗಿರುವ ಗದ್ದ, ವಿಶಿಷ್ಟ ರೀತಿಯಲ್ಲಿ ಬಿಡಿಸಿದ ಕಣ್ಣು, ಹಣೆಯಿಂದ ಗಲ್ಲದವರೆಗೆ ಒಂದು ಸುರುಳಿಯಾಗುವ ಶ್ವೇತರೇಖೆ ಚಿತ್ರಕ್ಕೆ ಮೆರುಗನ್ನು ತರುತ್ತವೆ.

ರಬ್ಬು ಬಣ್ಣಗಳಾದ ಕೆಂಪು, ಹಸಿರು, ನೀಲಿ, ಕಪ್ಪು, ಹಳದಿ ಇವರ ಆಯ್ಕೆ. ಹಿಂಬದಿಯ ವರ್ಣ ಹೆಚ್ಚಾಗಿ ಕೆಂಪು ಬಣ್ಣದಿಂದಲೇ ಆವರಿಸಿರುವುದನ್ನು ಕಾಣುತ್ತೇವೆ. ಕ್ವಚಿತ್ತಾಗಿ 'ಶ್ವೇತವರ್ಣ' ಹಿಂಬದಿಯನ್ನು ಆವರಿಸಿರುತ್ತದೆ.


ಪ್ರತಿ ಪಟ್ಟಾ ಚಿತ್ರವೂ ಚೌಕಟ್ಟಿನಂತಹ (Frame) ಅಂಚಿನ ನಕ್ಷೆಯನ್ನು ಹೊಂದಿರುವುದು ಒಂದು ವಿಶೇಷ. ಚಿತ್ರದ ಗಾತ್ರಕ್ಕೆ ತಕ್ಕಂತೆ ಈ ಚೌಕಟ್ಟಿನ ಅಗಲಳತೆ ಹೆಚ್ಚು ಕಡಿಮೆಯಾಗಿರುತ್ತದೆ.

'ಪಟ್ಟಾ' ಎಂದರೆ ಬಟ್ಟೆ. ಚಿತ್ರಗಳಿಗೆ ಉಪಯೋಗಿಸುವ ಈ ಬಟ್ಟೆಗಳನ್ನು ಸ್ಥಳೀಯವಾಗಿ ಹದಗೊಳಿಸಿರಲಾಗಿರುತ್ತದೆ. ಹುಣಸೇಬೀಜದಿಂದ ತಯಾರಿಸಿದ ಅಂಟಿನಲ್ಲಿ ಸುಣ್ಣದ ಮಿಶ್ರಣ ಮಾಡಿ – ಲೇಪಿಸಿ ತಯಾರಿಸಿದ ಈ ಬಟ್ಟೆಯೇ 'ಪಟ್ಟಾ'. ಅಂಟು ತಯಾರಿಸುವ, ಸುಣ್ಣ ಬೆರೆಸಿ ಬಟ್ಟೆಗೆ ಲೇಪಿಸಿ ಬಿಸಿಲಿನಲ್ಲಿ ಒಣಗಿಸುವ ಕಾರ್ಯ ಮನೆಯ ಹೆಂಗಳೆಯರದು. ಹೀಗೆ ಸಿದ್ಧವಾದ ಕ್ಯಾನ್ವಾಸ್‌ಗಳನ್ನು ತಮಗೆ ಬೇಕಾದ ಅಳತೆಗೆ ಕತ್ತರಿಸಿಕೊಂಡು – ಚಿತ್ರಿಸುವ ಕಾರ್ಯ



* ಪೂತನೀ ಪ್ರಾಣಹರಣ


* ರುಕ್ಮಿಣೀ ಸಹಿತ ಜಗನ್ನಾಥ ಬಲರಾಮ:



ಗಂಡಸರದು. ಹುಣಸೇಬೀಜದ ಅಂಟನ್ನು ಉಪಯೋಗಿಸಿದ್ದರಿಂದ, ಬಟ್ಟೆ ಒಂದಿಷ್ಟು ಉಡುಗಿ ಹಪ್ಪಳದ ಹಾಗೆ ಮಣಿದಿರುತ್ತದೆ. ಆ ಬಟ್ಟೆಯನ್ನು ಚಿತ್ರಣಕ್ಕೆ ಮೊದಲು ಕಟ್ಟಿಗೆ ರೋಲರ್‌ನಿಂದ ತೀಡಿ ಸರಿಪಡಿಸಿ ಕೊಳ್ಳಬೇಕಾಗುತ್ತದೆ.

ಈ ರೀತಿಯಲ್ಲಿ ಬಟ್ಟೆಯು ತಯಾರಾದರೆ ಬೇಕಾದ ವರ್ಣಗಳನ್ನು ಇವರೇ ಸಿದ್ಧಪಡಿಸಿ ಕೊಳ್ಳುವುದು ವಾಡಿಕೆ. ಶಂಖದ ಪುಡಿಯಿಂದ ಬಿಳಿಬಣ್ಣ. 'ಹರಿತಾಳ' ಎಂಬ ಕಲ್ಲಿನಿಂದ ಹಳದಿ. 'ಗೇರು' ಹುಣ್ಣಿನಿಂದ ಕೆಂಪು. ತೆಂಗಿನ ಚಿಪ್ಪನ್ನು ಸುಟ್ಟು ಅದರಿಂದ ಕಪ್ಪು ಬಣ್ಣ. ಎಲೆಗಳಿಂದ ಹಸಿರು ಬಣ್ಣಗಳು ಸಿದ್ಧವಾಗಬೇಕು. ಈ ರೀತಿ ಪೂರ್ವದಿಂದ ಬಂದುದು, ಆದರೆ ಇಂದು ಕಾಲ ಬದಲಾಗಿದೆ. ಚಿತ್ರಗಳಿಗೂ ಬೇಡಿಕೆ ಹೆಚ್ಚಾಗುತ್ತಲಿದೆಯಾದ್ದರಿಂದ ತಾವೇ ಬಟ್ಟೆಯನ್ನು ಸಿದ್ಧಪಡಿಸಿಕೊಳ್ಳುವದೂ ಕಡಿಮೆಯಾಗಿದೆ. ಬಣ್ಣಗಳ ತಯಾರಿಕೆಗೂ ಹಿಂಜರಿಯುತ್ತಾರೆ, ಈ ಬಟ್ಟೆಗೆ ಬದಲಾಗಿ ಇಂದು ಪೇಟೆಯಲ್ಲಿ ಸಿಗುವ ಮೇಣಗಮಟವನ್ನೂ, ಸಿದ್ಧಪಡಿಸಿದ ಬಣ್ಣಗಳಿಗೆ ಬದಲಾಗಿ ಡಬ್ಬಗಳಲ್ಲಿ ಸಿಗುವ ತೈಲವರ್ಣಗಳನ್ನೂ ಉಪಯೋಗಿಸಲಾಗುತ್ತದೆ. ಮಾಧ್ಯಮದಲ್ಲಿ ಈ ಬದಲಾವಣೆ ಕಂಡರೂ – ಪಾರಂಪರಿಕವಾಗಿ ಬಂದ 'ಶೈಲಿ'ಯಲ್ಲಿ ಮಾತ್ರ ಯಾವ ಬದಲಾವಣೆಯೂ ಆಗಿಲ್ಲ! ಚಿತ್ರವು ಸಿದ್ಧವಾದ ಮೇಲೆ ಪೂರ್ವದಲ್ಲಿ ಚಿತ್ರಕ್ಕೆ ಲೇಪಿಸಿದಂತೆ ಈಗಲೂ ತಿಳಿ ಅರಗಿನ ರಸವನ್ನು ಲೇಪಿಸಲಾಗುತ್ತದೆ. ಇದರಿಂದ ಚಿತ್ರಕ್ಕೆ ಹೊಳಪು ಬರುವದಲ್ಲದೇ ವಾತಾವರಣದ ಪರಿಣಾಮವು ಈ ಚಿತ್ರಗಳ ಮೇಲೆ ಆಗುವದಿಲ್ಲ!

ಈ ಚಿತ್ರಗಳನ್ನು ರಚಿಸುವ ಜನಕ್ಕೆ ಚಿತ್ರಕಾರ ಎಂದೇ ಕರೆಯುತ್ತಾರೆ. ಈ ಕಲೆ – ಒರಿಸ್ಸಾ ಜಾನಪದ ಚಿತ್ರಕಲೆಯೆಂದೂ ಕರೆ



ವರೂ ಈ ಚಿತ್ರಗಳು ನಿರ್ಮಾಣವಾಗುವದು ಈ ನಾಡಿನ ಕೆಲವೇ ಸ್ಥಳಗಳಲ್ಲಿ ಮಾತ್ರ. ಪುರಿ ಜಿಲ್ಲೆಯ ರಘುರಾಜಪುರ, ಗಂಜಾಮ್ ಜಿಲ್ಲೆಯಲ್ಲಿಯ ಪರಖಿಮಂಡಿ ಹಾಗೂ ಚಿಕಿಟಿ, ಬೋಲಂಗೀರ ಜಿಲ್ಲೆಯ ಸೋನಪುರ ಇವೇ ಇವುಗಳ ನಿರ್ಮಿತಿಯ ಮುಖ್ಯ ಸ್ಥಳಗಳು.

ಬಟ್ಟೆಯ ಮೇಲಿನ ಚಿತ್ರಗಳಲ್ಲದೇ 'ಗಂಜೀಫಾ' ಕಾರ್ಡು (ಗಂಜೀಫಾ – ಒಂದು ಆಟ), ಮುಖವಾಡಗಳನ್ನ ಈ ಜನ ತಯಾರಿಸುತ್ತಾರೆ, ಜಾನಪದ ಕಲೆಗಳನ್ನು ಕಾಪಾಡುವ ಸರಕಾರದ ಧೋರಣೆ, ಜನರಿಂದ ಬೇಡಿಕೆ ಇವುಗಳಿಂದಾಗಿ ಇಂದು ಈ ಕಲೆಗೆ ಪ್ರೋತ್ಸಾಹ ದೊರೆಯುತ್ತಿದೆ. ಪರದೇಶಗಳಲ್ಲೂ ಇವಕ್ಕೆ ಬೇಡಿಕೆ ಇದೆ!